Office ofthe,
Senior Deputy Director
Local Audit circle, 2nd Floor, Asiatic Bilding,
K.G.Road,
Bangalore-560009

ಕರ್ನಾಟಕ ಸರಕಾರ
(ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ)

ಹಿರಿಯ ಉಪ ನಿರ್ದೇಶಕರ ಕಚೇರಿ
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
2ನೇ ಮಹಡಿ,ಏಷಿಯಾಟಿಕ್ ಕಟ್ಟಡ
ಕೆ.ಜಿ.ರಸ್ತೆ, ಬೆಂಗಳೂರು:09
ದೂರವಾಣಿ ಸಂಖ್ಯೆ:080–22267589

ಸಂಖ್ಯೆ: ಸ್ಥಲೆಪವ:ಬೆಂ.ಕಾವಿ:2018–19 ದಿನಾಂಕ:

ಇವರಿಗೆ,

ಸದಸ್ಯ ಕಾರ್ಯದರ್ಶಿಗಳು,
ಆನೇಕಲ್ ಯೋಜನಾ ಪ್ರಾಧಿಕಾರ,
ನಂ.430 ಅಣ್ಣ ಬಿಲ್ಡಿಂಗ್ 1ನೇ ಮಹಡಿ,
ಹೆನ್ನಾಗರ ಗೇಟ್ ಹುಸೂರು ರಸ್ತೆ ಬೆಂಗಳೂರು.

ಮಾನ್ಯರೆ,

ವಿಷಯ: 2019–20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಕಳುಹಿಸುವ ಬಗ್ಗೆ.

*****

ಆನೇಕಲ್ ಯೋಜನಾ ಪ್ರಾಧಿಕಾರ, ಈ ಸಂಸ್ಥೆಯ 2019–20ನೇ ಸಾಲಿನ ಲೆಕ್ಕ ತನಿಖೆಯು ಮುಗಿದಿದ್ದು, ಸದರಿ ಲೆಕ್ಕ ತನಿಖಾ ವರದಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ. ಹಾಗೂ ಈ ವರದಿಯ ಕಂಡಿಕೆಗಳಲ್ಲಿ ಗಮನಿಸಿರುವ ಲೋಪದೋಷಗಳು, ಆಕ್ಷೇಪಣೆಗಳು ಹಾಗೂ ವಸೂಲಾತಿ ಕಂಡಿಕೆಗಳ ಮೇಲೆ ಅಗತ್ಯ ಕ್ರಮ ತೆಗೆದುಕೊಂಡು ಅನುಸರಣಾ ವರದಿಯನ್ನು ಸೂಕ್ತ ಪ್ರಾಧಿಕಾರದ ಮೂಲಕ ಕೂಡಲೇ ಕಳುಹಿಸಿ ಕೊಡುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಹಿರಿಯ ಉಪ ನಿರ್ದೇಶಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಬೆಂಗಳೂರು.

ಪ್ರತಿಯನ್ನು

1. ಆಯುಕ್ತರು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಯೋಜನಾ ಪ್ರಾಧಿಕಾರ ಆಲಿಆಸ್ಕರ್ ರಸ್ತೆ ಬೆಂಗಳೂರು.
2. ಪ್ರಧಾನ ನಿರ್ದೇಶಕರು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, 3ನೇ ಮಹಡಿ ಟಿ.ಟಿ.ಎಂ.ಸಿ. ಕಟ್ಟಡ, ಶಾಂತಿನಗರ, ಬೆಂಗಳೂರು.
3. ಕಚೇರಿ ಪ್ರತಿ.
4. ಹೆಚ್ಚುವರಿ ಪ್ರತಿ.

ಆನೇಕಲ್ ಯೋಜನಾ ಪ್ರಾಧಿಕಾರ 2019–20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಕಂಡುಬಂದಂತಹ ಪ್ರಮುಖ ನ್ಯೂನತೆಗಳು ಮತ್ತು ಆಕ್ಷೇಪಣೆ ಮೊತ್ತ ಹಾಗೂ ವಸೂಲಾತಿ ಮೊತ್ತಗಳ ವಿವರಗಳು.

ಕ್ರ.ಸಂ	ಕಂಡಿಕೆ ಸಂಖ್ಯೆ	ಪ್ರಮುಖವಾದ ನ್ಯೂನತೆಗಳು	ಆಕ್ಷೇಪಣೆ ಮೊತ್ತ	ವಸೂಲಾತಿ ಮೊತ್ತ
1	21	ಉತ್ತಮತೆ ಶುಲ್ಕದ ಶೇ.5ರಷ್ಟು ನಗರ ಯೋಜನಾ ಮಂಡಳಿಗೆ ಪಾವತಿಸಬೇಕಾಗಿದ್ದು ಪೂರ್ಣ ಮೊತ್ತ ಪಾವತಿಸದಿರುವುದು ಹಾಗೂ ಡಿಸಿಬಿ ವಹಿ ನಿರ್ವಹಿಸದಿರುವುದು	20,06,040/–	–
2	25	ಬಡಾವಣೆ ನಕ್ಷೆ ಅನುಮೋದನೆ ನೀಡುವಾಗ ನಿಯಮ ಉಲ್ಲಂಘಿಸಿ ಕಡಿಮೆ ಉತ್ತಮತೆ ಶುಲ್ಕ ವಸೂಲಿಯಿಂದ ಸಂಸ್ಥೆಗೆ ನಷ್ಟವಾಗಿರುವುದು	119,63,47,830/–	–
3	26	ಆನೇಕಲ್ ಯೋಜನಾ ಪ್ರಾಧಿಕಾರ ನಿಧಿಯಲ್ಲಿ ನಿರ್ವಹಿಸಲಾಗಿರುವ ಕಾಮಗಾರಿಗಳ ಕುರಿತು ಹಾಗೂ ಉಪಯೋಗಿತ ಪ್ರಮಾಣಪತ್ರ ಪಡೆಯದೆ ಇರುವುದು	11,23,84,731/–	–
4	29	ಲೆಕ್ಕ ಪರಿಶೋಧನಾ ಶುಲ್ಕ ಪಾವತಿಸದಿರುವುದು	4,35,728/–	–
5	30	ಮಾಹಿತಿ ಹಕ್ಕುವಸೂಲಿ ಶುಲ್ಕ ಲೆಕ್ಕ ಶೀರ್ಷಿಕೆಗೆ ಜಮಾ ಮಾಡದಿರುವುದು.	13,104/–	–
		ಒಟ್ಟು ರೂ.	**1311187433**	

ಹಿರಿಯ ಉಪನಿರ್ದೇಶಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಬೆಂಗಳೂರು.

ಆನೇಕಲ್ ಯೋಜನಾ ಪ್ರಾಧಿಕಾರದ 2019–20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

1. ಪೀಠಿಕೆ:–

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ / 72 / ಬೆಂ.ರೂ.ಪ್ರಾ/2003 ದಿನಾಂಕ: 03–03–2006ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 (1963)ರ ಕರ್ನಾಟಕ ಕಾಯ್ದೆ ಸಂಖ್ಯೆ:11 ರ 4 ಎ ಪ್ರಕರಣದ (1)ನೇ ಪ್ರಕರಣದ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆನೇಕಲ್ ಸ್ಥಳೀಯ ಯೋಜನಾ ಪ್ರದೇಶವನ್ನು ದಿನಾಂಕ:02–03–2006 ರಿಂದ ಜಾರಿಗೆ ಬರುವಂತೆ ಆನೇಕಲ್ ಸ್ಥಳೀಯ ಯೋಜನಾ ಪ್ರದೇಶ ಎಂದು ಕರೆಯಲಾಗಿದೆ.

ಮುಂದುವರೆದು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 31 ಬೆಂರೂಪ್ರಾ 2006 ದಿನಾಂಕ:19–07–2006 ರಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ (4)ಸಿ ಪ್ರಕರಣದ ಅಡಿಯಲ್ಲಿ ಅಧ್ಯಕ್ಷರು / ಸದಸ್ಯ ಕಾರ್ಯದರ್ಶಿ ಹಾಗೂ ಸದಸ್ಯರನ್ನೊಳಗೊಂಡ ಆನೇಕಲ್ ಯೋಜನಾ ಪ್ರಾಧಿಕಾರವನ್ನು ರಚಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಈ ಪ್ರಕಾರವಾಗಿ ದಿನಾಂಕ:19–07–2006 ರಿಂದ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿರುತ್ತದೆ.

ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು 1961ರ ಸೇರ್ಪಡೆ 68(ಸಿ)(2) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು 1965ರ ನಿಯಮ 23(1)ರಂತೆ ಆನೇಕಲ್ ಯೋಜನಾ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಕೈಗೊಂಡಿದ್ದು, ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದ ಪ್ರಮುಖ ಲೋಪದೋಷಗಳನ್ನು ಮುಂದಿನ ಕಂಡಿಕೆಗಳಲ್ಲಿ ಪ್ರಸ್ತಾಪಿಸಲಾಗಿದ್ದು, ಸದರಿ ಕಂಡಿಕೆಗಳಿಗೆ ಸೂಕ್ತ ಅನುಸರಣಾ ವರದಿಗಳನ್ನು ಸಕ್ಷಮ ಪ್ರಾಧಿಕಾರದ ಮುಖೇನ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

2. ಲೆಕ್ಕ ತಪಾಸಣಾ ತಂಡದ ವಿವರಗಳು:–

1.	ಲೆಕ್ಕ ಪರಿಶೋಧಕರ ಹೆಸರು	ಶ್ರೀ ವೆಂಕಟಪ್ರಸಾದ್, ಲೆಕ್ಕಾಪರಿಶೋಧನಾಧಿಕಾರಿ, ಶ್ರೀ ಮಂಜುನಾಥ. ಎಲ್.ಕೆ. ಲೆ.ಪ. ಶ್ರೀ ಮಂಜುಳ.ಸಿ, ಲೆ.ಪ.
2.	ಲೆಕ್ಕ ಪರಿಶೋಧನಾ ಅವಧಿ	2019–20
3.	ಲೆಕ್ಕ ಪರಿಶೋಧನೆ ಪ್ರಾರಂಭ ದಿನಾಂಕ	25.05.2020
4.	ಲೆಕ್ಕ ಪರಿಶೋಧನೆ ಮುಕ್ತಾಯ ದಿನಾಂಕ	30.05.2020
5.	ಉಪಯೋಗಿಸಿದ ಮಾನವ ದಿನಗಳು	22 ಏಕ ಮಾನವ ದಿನಗಳು
6.	ಪುನರ್ ಪರಿಶೀಲನಾ ಅಧಿಕಾರಿಗಳು	ಶ್ರೀಮತಿ ರಾಜಶ್ರೀ, ಅಪರ ನಿರ್ದೇಶಕರು, ಪ್ರಾಂತೀಯ ಕಛೇರಿ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ,
7.	ಪುನರ್ ಪರಿಶೀಲನಾ ದಿನಾಂಕ	19.06.2020

3. ಪ್ರಾಧಿಕಾರದ ಆಡಳಿತ ವರ್ಗದ ವಿವರಗಳು:–

ಕ್ರ.ಸಂ.	ಪದನಾಮ	ಹೆಸರುಶ್ರೀಮತಿ / ಶ್ರೀಯುತರು	ದಿನಾಂಕ	
			ರಿಂದ	ವರೆಗೆ
1.	ಅಧ್ಯಕ್ಷರು	ಶ್ರೀ.ಮೋಹನ್ ರಾಜು ಭಾ.ಆ.ಸೇ	01.04.2019	30.06.2019
		ಶ್ರೀ. ಎಸ್.ಹರೀಶ್	01.07.2019	31.07.2019
		ಶ್ರೀ. ವಿ.ಪಿ.ಇಕ್ಕೇರಿ. ಭಾ.ಆ.ಸೇ	18.08.2019	18.12.2019
		ಶ್ರೀ. ಕೆ.ಜಯಣ್ಣ	19.12.2019	31.03.2020
2.	ಸದಸ್ಯ ಕಾರ್ಯದರ್ಶಿಗಳು	ಶ್ರೀ ವೆಂಕಟ ದುರ್ಗಾಪ್ರಸಾದ್ ಕುಂಚಾಲ	01.04.2019	05.07.2019
		ಶ್ರೀ. ಬಿ.ಮಂಜೇಶ್(ಪ್ರಭಾರ)	06.07.2019	19.08.2019
		ಶ್ರೀ.ಎನ್.ಎಂ. ನಂಜೇಗೌಡ	20.08.2019	31.03.2020
3.	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು	ಶ್ರೀ ಬಿ.ಮಂಜೇಶ್	01.04.2019	19.09.2019
		ಶ್ರೀ.ಕೆ.ಎನ್. ನಾಗರಾಜ	19.09.2019	31.03.2020
4	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	ಶ್ರೀಮತಿ ವೀಣಾ ಸಿ.ನಿರ್ವಾಣಿ	01.04.2019	18.09.2019
		ಶ್ರೀ ಶಿವಪ್ರಸಾದ್	13.12.2019	15.07.2019
		ಶ್ರೀ.ವೆಂಕಟೇಶಪ್ಪ	18.07.2019	15.12.2019
		ಶ್ರೀ.ಜಗನ್ನಾಥ	18.09.2019	31.03.2020
5.	ನಗರ ಯೋಜಕರು	ಶ್ರೀಮತಿ. ಓ. ಜಾನಕಿ	01.04.2019	31.03.2020
6.	ವಿಷಯ ನಿರ್ವಾಹಕರು	ಕುಮಾರಿ. ಕೆ.ವಿ.ದಿವ್ಯ	01.04.2019	31.03.2020

4. ಹಿಂದಿನ ಸಾಲುಗಳ ಲೆಕ್ಕ ತನಿಖಾ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸಿರುವುದು:–

ಆನೇಕಲ್ ಯೋಜನಾ ಪ್ರಾಧಿಕಾರದ 2006–07 ರಿಂದ 2018–19ನೇ ಸಾಲಿನ ವರೆಗಿನ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ವಿವರಗಳು ಈ ಕೆಳಕಂಡಂತಿದ್ದು, ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಾವಳಿಗಳು 1965ರ ನಿಯಮ 27ರಂತೆ ಅನುಸರಣಾ ವರದಿಗಳನ್ನು ತಯಾರಿಸಿ ಅವುಗಳನ್ನು ಆಡಿಟ್ ಮಿನಿಟ್ ಪುಸ್ತಕದಲ್ಲಿ ದಾಖಲಿಸಿ ಸಕ್ಷಮ ಪ್ರಾಧಿಕಾರದ ಮೂಲಕ ಹಿರಿಯ ಉಪ ನಿರ್ದೇಶಕರು ಹಾಗೂ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಬೆಂಗಳೂರುಗೆ ಸಲ್ಲಿಸಬೇಕಾಗಿತ್ತು. ಕಂಡಿಕೆಗಳು ತೀರುವಳಿಯಾಗದೇ ಹಾಗೇಯೆ ಮುಂದುವರೆದಿರುತ್ತದೆ. ತೀರುವಳಿಯಾಗದೇ ಬಾಕಿ ಉಳಿದಿರುವ ಆಕ್ಷೇಪಣಾ ಮತ್ತು ವಸೂಲಾತಿ ಮೊತ್ತಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ವರ್ಷ	ಆಕ್ಷೇಪಣೆ			ವಸೂಲಾತಿ	ತೀರುವಳಿ ಮೊತ್ತ				ಆಖೈರು ಶಿಲ್ಕು			
		ಕಂಡಿಕೆ		ಮೊತ್ತ	ಕಂಡಿಕೆ	ಮೊತ್ತ	ಆಕ್ಷೇಪಣೆ	ವಸೂಲಾತಿ			ಆಕ್ಷೇಪಣೆ		ವಸೂಲಾತಿ
1.	2006–07	–		–	01	878	–	01	878		–		–
2.	2007–08	–		–	01	363	–	01	363		–		–

3.	2008–09	–		–	01	318	–	01	318		–		–
4.	2008–09	–		–	01	363	–	01	363		–		–
5.	2011–12	–		–	02	2195	–	02	2195		–		–
6.	2011–12	–		–	01	133386575	–	–	–		–	01	133386575
7.	2012–13	–		–	02	4599	–	02	6906	–	–	–	–
8.	2013–14	–	01	5457	01	–			–	01	5457	–	–
9.	2014–15	–	01	1340						01	1340	–	
10.	2015–16	–	–	–	–	–	–	–	–	–	–	–	–
11.	2016–17		03	1416025243	02	44108	–	–	–	03	1416025243	02	44108
12	2017–18		03	2300090021	01	500404	––		–	03	2300090021	01	500404
13	2018–19		05	2110800510	–	–	–	–	–	05	210800510	–	–
	ಒಟ್ಟು		13	5826922571	12	133939803		8	8716	8	5826922571	4	133931087

5. ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆ:–

ಲೆಕ್ಕ ಪರಿಶೋಧನಾ ದಿನಾಂಕ:28–08–2020ರಂದು ಕೆಳಕಂಡಂತೆ ಶಿಲ್ಕುಗಳು ಇದ್ದು, ಇದನ್ನು ಭೌತಿಕವಾಗಿ ಪರಿಶೀಲಿಸಲಾಗಿ ವಿವಿಧ ಶಿಲ್ಕುಗಳು ದಾಸ್ತಾನುನಲ್ಲಿದ್ದು ಪುಸ್ತಕದಆಖೈರು ಶಿಲ್ಕುಗೆ ತಾಳೆ ಇರುತ್ತದೆ.

1.	ಕೈ ನಗದು ಶಿಲ್ಕು	43/–
2.	ಅಂಚೇ ಚೀಟಿಗಳು	1217
3.	ರಸೀದಿ ಪುಸ್ತಕಗಳು	19 ಪುಸ್ತಕಗಳು (41102 ಇಂದ 41120)

6. ಆಯವ್ಯಯ ವಿವರ:–

ಕೆಟಿಸಿಪಿ ಕಾಯ್ದೆ 1961ರ ಸೆಕ್ಷನ್ 68ಬಿ ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು 1965ರ ನಿಯಮ 22ರನ್ವಯ ಪ್ರತಿ ವರ್ಷದ ಜನವರಿ ಮಾಹೆಯೊಳಗಾಗಿ ಮುಂದಿನ ಸಾಲಿನ ಆಯವ್ಯಯವನ್ನು ಸಿದ್ಧಪಡಿಸಿ ಸಲ್ಲಿಸಬೇಕಾಗಿರುತ್ತದೆ.ಅದರಂತೆ ಸದರಿ ಆಯವ್ಯಯಕ್ಕೆ ಸರ್ಕಾರದಿಂದ ಇದುವರೆಗೆ ಅನುಮೋದನೆ ಪಡೆದಿರುವುದಿಲ್ಲ. ಅನುಮೋದನೆ ಪಡೆಯುವ ಬಗ್ಗೆ ನಿಯಮಾನುಸಾರ ಕ್ರಮವಹಿಸುವುದು.

ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿದ ಅಂದಾಜು ಆಯವ್ಯಯದಂತೆ ನಿರೀಕ್ಷಿತ ಹಾಗೂ ಸಂಸ್ಥೆಯವರು ನೀಡಿದ ವಿವರಗಳಂತೆ ವಾಸ್ತವಿಕ ಅಂಕಿ ಅಂಶಗಳನ್ನು ಕೆಳಗೆ ನೀಡಲಾಗಿದೆ.

	ನಿರೀಕ್ಷಿತ		ವಾಸ್ತವಿಕ
	Ordinary section	Capital section	Actuals
1.4.2019ಕ್ಕೆ ಪ್ರಾರಂಭ ಶಿಲ್ಕು	227548299	1392813642	27949018
2019–20ರಲ್ಲಿ ಜಮೆ	152100000	2040000000	1968685744
ಒಟ್ಟುರೂ.	379648299	34328103642	1996634762
2019–20ರಲ್ಲಿ ವೆಚ್ಚ	883500000	1210000000	1961169925
31.03.2020ಕ್ಕೆ ಆಖೈರು ಶಿಲ್ಕು	503851701	2222813642	35464837

ಮೇಲಿನಂತೆ ನಿರೀಕ್ಷಿತ Ordinary section ಹಾಗೂ Capital section ಗಳ ಜಮಾ ಹಾಗೂ ಖರ್ಚುಗಳ ಅಂಕಿ ಅಂಶಗಳನ್ನು ಗಮನಿಸಿದಾಗ ಯಾವ ಮಾನದಂಡದ ಮೇಲೆ ಆಯವ್ಯಯ ಸಿದ್ದಪಡಿಸಲಾಗಿದೆ ಎಂಬ ವಿವರ ತಿಳಿದು ಬಂದಿರುವುದಿಲ್ಲ. ಈ ಸಂಬಂಧ ವಿವರಣೆ ನೀಡುವುದು. ಅಲ್ಲದೇ ಇನ್ನು ಮುಂದೆ ಆಯವ್ಯಯ ಸಿದ್ದಪಡಿಸುವಾಗ ಹಿಂದಿನ ಮೂರು ವರ್ಷಗಳ ಆದಾಯ ಮತ್ತು ವೆಚ್ಚಗಳ ಸರಾಸರಿಯನ್ನು ಗಣನೆಗೆ ತೆಗೆದುಕೊಂಡು ತಯಾರಿಸಲು ಕ್ರಮ ವಹಿಸುವುದು.

7. ಸಮಗ್ರ ಆರ್ಥಿಕ ಪರಿಸ್ಥಿತಿ ವಿವರ:–

ಲೆಕ್ಕ ಖಾತೆವಾರು2019–20ನೇ ಸಾಲಿನ ಆರ್ಥಿಕ ಪರಿಸ್ಥಿತಿ ಈ ಕೆಳಕಂಡಂತಿದೆ.

ವಿವರ	ಒಟ್ಟು
1.4.2019ಕ್ಕೆ ಪ್ರಾರಂಭ ಶಿಲ್ಕು	27949018
2019–20ರಲ್ಲಿ ಜಮೆ	196885744
ಒಟ್ಟುರೂ.	**1996634762**
2019–20ರಲ್ಲಿ ವೆಚ್ಚ	1961169925
31.03.2020ಕ್ಕೆ ಬ್ಯಾಂಕ್ ಪಾಸ್ ಪುಸ್ತಕ ಆಖೈರು ಶಿಲ್ಕು	35464837

8. ನಿಗಧಿತ ನಮೂನೆಯಲ್ಲಿ ಸಾಮಾನ್ಯ ನಗದು ವಹಿಯನ್ನು ನಿರ್ವಹಿಸದಿರುವುದು:–

ಪ್ರಾಧಿಕಾರದಲ್ಲಿ ಕರ್ನಾಟಕ ಆರ್ಥಿಕ ಸಂಹಿತೆ 328 ರಿಂದ 382 ಎ ವರೆಗಿನ ಅನುಚ್ಛೇದಗಳಂತೆ ಸರ್ಕಾರಿ ಸ್ವಾಯುಕ್ತ ಸಂಸ್ಥೆಗಳ ಲೆಕ್ಕಗಳನ್ನು ನಿಗಧಿತ ಸಾಮಾನ್ಯ ನಗದು ವಹಿಯಲ್ಲಿ ಪ್ರತಿ ದಿನದ ಜಮೆ ಮತ್ತು ವೆಚ್ಚಗಳನ್ನು ನಮೂದಿಸಿ ಪ್ರತಿ ಮಾಹೆಯ ಅಂತ್ಯಕ್ಕೆ ಆಯಾ ಮಾಹೆಯ ವಹಿವಾಟಿನ ಪ್ರತಿ ನಮೂದುಗಳನ್ನು ಬ್ಯಾಂಕ್ ಪಾಸು ಪುಸ್ತಕದೊಂದಿಗೆ ಲೆಕ್ಕ ಸಮನ್ವಯಗೊಳಿಸಿ ವ್ಯತ್ಯಾಸ ಬಂದಲ್ಲಿ ಕಾರಣಗಳನ್ನು ನಮೂದಿಸಿ ದೃಢೀಕರಿಸಬೇಕಾಗಿರುತ್ತದೆ. ಆದರೆ ಪ್ರಾಧಿಕಾರದಲ್ಲಿ ಇದಕ್ಕೆ ಬದಲಾಗಿ ಒಂದು ಸಾಮಾನ್ಯ ವಹಿಯಲ್ಲಿ ದಿನ ನಿತ್ಯದ ವಹಿವಾಟನ್ನು ನಮೂದಿಸಿ ನಿರ್ವಹಿಸಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಹಿಂದಿನ ವರದಿಯಲ್ಲಿಯೂ ಪ್ರಸ್ತಾಪಿಸಲಾಗಿದ್ದರೂ ಯಾವುದೇ ಕ್ರಮ ವಹಿಸಿರುವುದಿಲ್ಲ. ನಿಯಮರೀತ್ಯ ಕ್ರಮವಹಿಸಲು ಸೂಚಿಸಿದೆ.

9. ಅನುದಾನಗಳ ವಿವರ:–

ಈ ಯೋಜನಾ ಪ್ರಾಧಿಕಾರಕ್ಕೆ 2019–20ರ ಸಾಲಿನಲ್ಲಿ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

10. ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿ:–

2019–20ರ ಸಾಲಿನಲ್ಲಿ ಪ್ರಾಧಿಕಾರದಲ್ಲಿ ಸ್ವೀಕರಿಸಿದ ಜಮಾ ಹಾಗೂ ಭರಿಸಲಾದ ವೆಚ್ಚಗಳಿಗೆ ಸಂಬಂಧಿಸಿದಂತೆ ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿಯನ್ನು ನಿರ್ವಹಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾಗಿರುವುದಿಲ್ಲ. ಆದರೆ ಪ್ರಾಧಿಕಾರದವರು ನೀಡಿದ ವಿವರಗಳಂತೆ ವರ್ಗೀಕೃತ ಜಮಾ ಮತ್ತು ಖರ್ಚಿನ ವಿವರಗಳನ್ನು ಅನುಬಂಧ – 1ರಲ್ಲಿ ವರದಿಗೆ ಲಗತ್ತಿಸಲಾಗಿದೆ.

11. ವಾರ್ಷಿಕ ಆಡಳಿತ ವರದಿ ವಿವರ:–

ಕರ್ನಾಟಕ ಪಟ್ಟಣ ಮತ್ತು ನಗ'ರ ಯೋಜನಾ ಕಾಯ್ದೆ 1961ರ ಸೆಕ್ಷನ್ 68ಡಿ ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಗಳು 1965ರ ನಿಯಮ 29ರಂತೆ ನಮೂನೆ – 5ರಲ್ಲಿ ಜಮಾ ಖರ್ಚುಗಳ ನಮೂನೆಯೊಡನೆ ವಾರ್ಷಿಕ ಆಡಳಿತ ವರದಿಯನ್ನು ತಯಾರಿಸಿ ಸರ್ಕಾರಕ್ಕೆ ಜೂನ್ 30ರೊಳಗಾಗಿ ಸಲ್ಲಿಸಬೇಕಾಗಿರುತ್ತದೆ. ಲೆಕ್ಕ ವಿಚಾರಣಾ ಪತ್ರ ಸಂಖ್ಯೆ:01/2019–20 ದಿನಾಂಕ:25.05.2020 ರಲ್ಲಿ ಜಾರಿಮಾಡಿ 2019–20ನೇ ಸಾಲಿನ ವಾರ್ಷಿಕ ವರದಿಯನ್ನು ಸಲ್ಲಿಸಿರುವ ಬಗ್ಗೆ ವಿವರಣೆ ಕೋರಲಾಗಿತ್ತು. ಲೆಕ್ಕ ಪರಿಶೋಧನೆ ಮುಕ್ತಾಯ ದಿನಾಂಕದ ವರೆಗೂ ವಿವರಗಳನ್ನು ಹಾಜರುಪಡಿಸಿರುವುದಿಲ್ಲ.2018–19ನೇ ಸಾಲಿನ ವಾರ್ಷಿಕ ವರದಿಯನ್ನು ಸಲ್ಲಿಸಿರುವ ಬಗ್ಗೆ ವಿವರ ಣೆ ಕೋರಲಾಗಿತ್ತು. ಲೆಕ್ಕ ಪರಿಶೋಧನೆ ಮುಕ್ತಾಯ ದಿನಾಂಕದವರೆಗೂ ವಿವರಗಳನ್ನು ಹಾಜರುಪಡಿಸಿರುವುದಿಲ್ಲ.

12. ಅಂಚೆ ಚೀಟಿಗಳ ವಹಿವಾಟಿನ ವಿವರ:–

2019–20ನೇ ಸಾಲಿನಲ್ಲಿ ಅಂಚೆ ಚೀಟಿಗಳ ವಹಿವಾಟಿನ ಬಗ್ಗೆ ವಹಿ ನಿರ್ವಹಿಸಿದ್ದು ಅದರಂತೆ ವಹಿವಾಟು ಈ ಕೆಳಕಂಡಂತಿದೆ.

1.4.2018ಕ್ಕೆ ಪ್ರಾರಂಭ ಶಿಲ್ಕು	213
2018–19ರಲ್ಲಿ ಸ್ವೀಕೃತಿ	24000
ಒಟ್ಟು ರೂ.	**24213**
2018–19ರಲ್ಲಿ ಉಪಯೋಗ	20331
31.03.2019ಕ್ಕೆ ಆಖೈರು ಶಿಲ್ಕು	3882

13. ರಶೀದಿ ಪುಸ್ತಕಗಳ ವಹಿವಾಟಿನ ವಿವರ:–

2019–20ನೇ ಸಾಲಿನಲ್ಲಿ ರಶೀದಿ ಪುಸ್ತಕಗಳ ವಹಿವಾಟು ದಾಸ್ತಾನು ವಹಿಯಂತೆ ಈ ಕೆಳಕಂಡಂತೆ ನೀಡಲಾಗಿದೆ.

(ರೂ.ಗಳಲ್ಲಿ)

1.4.2019ಕ್ಕೆ ಪ್ರಾರಂಭ ಶಿಲ್ಕು	05
2019–20ರಲ್ಲಿ ಸ್ವೀಕೃತಿ	30
ಒಟ್ಟು ರೂ.	**35**
2019–20ರಲ್ಲಿ ಉಪಯೋಗ	15
31.03.2020ಕ್ಕೆ ಆಖೈರು ಶಿಲ್ಕು	20

14. ಭೂ ಉಪಯೋಗ ಬದಲಾವಣೆ ಅರ್ಜಿ ನಮೂನೆಗಳ ವಹಿವಾಟಿನ ವಿವರ:–

2019–20ನೇ ಸಾಲಿನಲ್ಲಿ ಭೂ ಉಪಯೋಗ ಬದಲಾವಣೆ ಬಗ್ಗೆ ಅರ್ಜಿ ನಮೂನೆಗಳು (ರೂ.100/–) ವಹಿವಾಟಿನ ವಿವರ ಈ ಕೆಳಕಂಡಂತಿದೆ.

1.4.2019ಕ್ಕೆ ಪ್ರಾರಂಭ ಉಳಿಕೆ	1634
2019–20ರಲ್ಲಿ ಸ್ವೀಕೃತಿ	–
ಒಟ್ಟು ರೂ.	1634
2019–20ರಲ್ಲಿ ಮಾರಾಟ	66
31.03.2020ಕ್ಕೆ ಆಖೈರು ಶಿಲ್ಕು	1568

15. ರಶೀದಿ ಪುಸ್ತಕಗಳ ಉಪಯೋಗದ ವಿವರ:–

2019–20ನೇ ಸಾಲಿನಲ್ಲಿ ಉಪಯೋಗಿಸಿದ ರಶೀದಿ ಪುಸ್ತಕಗಳ ವಿವರ ಈ ಕೆಳಕಂಡಂತಿರುತ್ತದೆ.

ಕ್ರ.ಸಂ.	ರಶೀದಿ ಪುಸ್ತಕದ ಸಂಖ್ಯೆ	ರಸೀದಿ ಸಂಖ್ಯೆ		ಷರಾ
		ಯಿಂದ	ವರೆಗೆ	
1.	17825	1782489	1782500	ಪರಿಶೀಲಿಸಿದೆ
2.	9980	997915	998000	ಪರಿಶೀಲಿಸಿದೆ
3.	17826–17830	1782501	178300	ಪರಿಶೀಲಿಸಿದೆ
4.	37028–37030	3702701	370300	ಪರಿಶೀಲಿಸಿದೆ
5.	37537	3753601	3753700	ಪರಿಶೀಲಿಸಿದೆ

2019–20ನೇ ಸಾಲಿನಲ್ಲಿ ಈ ಕೆಳಕಂಡ ರಶೀದಿ ಪುಸ್ತಕಗಳನ್ನು ಭಾಗಶಃ ಪರಿಶೀಲಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ.ಸಂ.	ರಶೀದಿ ಪುಸ್ತಕದ ಸಂಖ್ಯೆ	ರಸೀದಿ ಸಂಖ್ಯೆ	ದಿನಾಂಕ
		ಯಿಂದ ವರೆಗೆ	
1.	37539	3753810	20.03.2020
2.	37736	3773510	20.03.2020
3.	37540	3753910	20.03.2020
4.	37737	3773610	20.03.2020
5.	9974	924874	26.09.2019
6.	37536	3753515	17.03.2020
7.	37538	3753775	20.03.2020

ಭಾಗಶಃ ಪರಿಶೀಲಿಸಲಾಗಿರುವ ರಸೀದಿ ಪುಸ್ತಕಗಳನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

16. ಬಂಡವಾಳ ಹೂಡಿಕೆಗಳ ವಿವರ:–

2019–20ರ ಸಾಲಿನಲ್ಲಿ ಬಂಡವಾಳ ಹೂಡಿಕೆಗಳ ಬಗ್ಗೆ ವಹಿಯನ್ನು ನಿರ್ವಹಿಸಿ ಹಾಜರುಪಡಿಸಲಾಗಿದೆ.

1.4.2019ಕ್ಕೆ ಪ್ರಾರಂಭ ಉಳಿಕೆ	1738290000

2019–20ರಲ್ಲಿ ಸ್ವೀಕೃತಿ	1905526281
ಒಟ್ಟು ರೂ.	3643816281
2019–20ರಲ್ಲಿ ಮಾರಾಟ	1785700000
31.03.2020ಕ್ಕೆ ಆಖೈರು ಶಿಲ್ಕು	1858116281

ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

17. ರಶೀದಿಗಳ ಮೂಲಕ ವಸೂಲಿಸಿರುವ ಮೊತ್ತವನ್ನು ಪ್ರಾಧಿಕಾರದ ನಿಧಿಗೆ ಜಮೆ ಮಾಡಿರುವ ವಿವರ:–

ಆನೇಕಲ್ ಯೋಜನಾ ಪ್ರಾಧಿಕಾರದಲ್ಲಿ 2019–20ನೇ ಸಾಲಿನಲ್ಲಿ ರಶೀದಿ ಪುಸ್ತಕಗಳು, ಬ್ಯಾಂಕ್ ಚಲನ್, ಮತ್ತು ಪಾಸ್‌ಶೀಟ್‌ಗಳನ್ನು ಪರಿಶೀಲಿಸಲಾಗಿ, ಭೂ ಬದಲಾವಣೆ ಅರ್ಜಿ ಶುಲ್ಕ, ಸಿ.ಡಿ, ಜಡ್.ಆರ್, ಮತ್ತು ಮಹಾಯೋಜನೆ ನಕ್ಷೆ ಮಾರಾಟ ಶುಲ್ಕಗಳನ್ನು ಒಟ್ಟಾರೆಯಾಗಿ ರೂ.80582/–ಗಳನ್ನು ವಸೂಲಿಸಿದ್ದು ಪ್ರಾಧಿಕಾರದ ನಿಧಿಗೆ ಜಮೆ ಮಾಡಲಾಗಿರುತ್ತದೆ.

18. ಭದ್ರತಾ ಠೇವಣಿ ವಿವರ:–

ಆನೇಕಲ್ ಯೋಜನಾ ಪ್ರಾಧಿಕಾರದಲ್ಲಿ ಬಡಾವಣೆ ಮತ್ತು ಕಟ್ಟಡ ಸಮುಚ್ಛಯಗಳಿಗೆ ಮಂಜೂರಾತಿ ನೀಡುವ ಸಮಯದಲ್ಲಿ ಸರ್ಕಾರಿ ಆದೇಶ ಸಂ:ನ ಅಇ 264 ಬಿಎಂಆರ್ 15 2013 ಬೆಂಗಳೂರು ದಿನಾಂಕ:03–09–2014ರಂತೆ ಪ್ರತಿಚದರ ಮೀಟರ್ ಒಂದಕ್ಕೆ ರೂ.50/–ಗಳಂತೆ ಭದ್ರತಾ ಠೇವಣಿ ಮೊತ್ತ ವಸೂಲಿಸಬೇಕಾಗಿದ್ದು, ಅದರಂತೆ ಪ್ರಸಕ್ತ ಸಾಲಿನಲ್ಲಿ ವಸೂಲಿಸಿ ಪ್ರಾಧಿಕಾರದ ಖಾತೆಗೆ ಜಮಾ ಮಾಡಿರುತ್ತಾರೆ. ವಹಿವಾಟಿನ ವಿವರ ಈ ಕೆಳಕಂಡಂತಿದೆ

01.04.2019ಕ್ಕೆ ಪ್ರಾರಂಭಿಕ ಶಿಲ್ಕು	261607475
2019–20ನೇ ಸಾಲಿನಲ್ಲಿ ಸ್ವೀಕೃತಿ	18807850
ಒಟ್ಟು	**280415325**
2019–20ನೇ ಸಾಲಿನಲ್ಲಿ ವಾಪಸ್ಸಾತಿ	–
31.03.2020ಕ್ಕೆ ಆಖೈರು ಶಿಲ್ಕು	280415325

19. ಭದ್ರತಾ ಠೇವಣಿ ಶುಲ್ಕಗಳ ಮರುಪಾವತಿ ವಿವರಗಳನ್ನು ಹಾಜರುಪಡಿಸದಿರುವ ವಿವರ:–

ಆನೇಕಲ್ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಿರ್ಮಿಸುವ 5ನೇ ಅಂತಸ್ತು ಮತ್ತು ಹೆಚ್ಚಿನ ಮಹಡಿಗಳುಳ್ಳ ವಾಸದ ಕಟ್ಟಡಗಳು, ಗುಂಪು ಕಟ್ಟಡಗಳು ಮತ್ತು ಗೃಹಸ್ಥೋಮಗಳು ಹಾಗೂ 300 ಚ.ಮೀ.ಗಳಿಗಿಂತ ಹೆಚ್ಚಿನ ವಾಸದ ವಾಣಿಜ್ಯ ಕಟ್ಟಡಗಳಿಗೆ ಪ್ರತಿ ಚದರ ಮೀಟರ್‌ಗೆ ರೂ.50/– ಗಳಂತೆ ಭದ್ರತಾ ಠೇವಣಿಗಳನ್ನು ಅರ್ಜಿದಾರರಿಂದ ವಸೂಲಿಸಬೇಕಿರುತ್ತದೆ. 2019–20ನೇ ಸಾಲಿನ ಅಂತ್ಯಕ್ಕೆ ಭದ್ರತಾ ಠೇವಣಿ ಶುಲ್ಕ ರೂ.28,04,15,325/–ಗಳನ್ನು ವಸೂಲಿಸಿದ್ದು, ಭದ್ರತಾ ಠೇವಣಿ ಶುಲ್ಕಗಳನ್ನು ಮರುಪಾವತಿ ಮಾಡದಿರುವುದು ಕಂಡುಬಂದಿರುತ್ತದೆ.

ಮುಂದುವರೆದು ಹಿಂದಿನ ವರ್ಷಗಳಲ್ಲಿ ಮೇಲ್ಕಂಡ ವಿಧಗಳ ಕಟ್ಟಡಗಳನ್ನು ನಿರ್ಮಿಸಲು ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ನೀಡಿರುವ ಪೈಕಿ 2ವರ್ಷಗಳ ಅವಧಿಯಲ್ಲಿ ಕಟ್ಟಡಗಳನ್ನು ಅನುಮೋದಿತ ನಕ್ಷೆಗಳಿಗೆ ಅನುಗುಣವಾಗಿ ನಿರ್ಮಿಸಿರುವ ಪ್ರಕರಣಗಳಿಗೆ ಭದ್ರತಾ ಠೇವಣಿ ಮರುಪಾವತಿ ಮಾಡಿರುವ ವಿವರಗಳು, ಇಲ್ಲವಾದಲ್ಲಿ ನಕ್ಷೆಗಳಿಗೆ ವಿರುದ್ಧವಾಗಿ ಕಟ್ಟಡಗಳನ್ನು ನಿರ್ಮಿಸಿದ್ದಲ್ಲಿ ಭದ್ರತಾ ಠೇವಣಿ ಮುಟ್ಟುಗೋಲು ಹಾಕಿಕೊಂಡಿದ್ದಲ್ಲಿ ಅವುಗಳ ವಿವರಗಳು ಹಾಗೂ 2 ವರ್ಷಗಳ ಅವಧಿಯಲ್ಲಿ ಕಟ್ಟಡಗಳು ಪೂರ್ಣಗೊಳಿಸದಿರುವ ಕಟ್ಟಡಗಳ ವಿರುದ್ಧ ನಿಯಮಾನುಸಾರಕೈಗೊಂಡಿರುವ ಕ್ರಮಗಳ ಬಗ್ಗೆ ವಿವರ / ಮಾಹಿತಿಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸಿರುವುದಿಲ್ಲ.

ಹಾಗೂ ನಿಯಮಾನುಸಾರ 2 ವರ್ಷದೊಳಗೆ ಕಟ್ಟಡ ನಿರ್ಮಿಸದಿದ್ದಲ್ಲಿ ಅಥವಾ ಅನುಮೋದಿತ ನಕ್ಷೆಗಳಿಗೆ ವಿರುದ್ಧವಾಗಿ ಕಟ್ಟಡ ನಿರ್ಮಿಸಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಭದ್ರತಾ ಠೇವಣಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಅಗತ್ಯ ಕ್ರಮವಹಿಸಲು ಸೂಚಿಸಿದೆ.

20. ಸಿ.ಡಿ. ಮತ್ತು ಮ್ಯಾಪ್‌ಗಳ ದಾಸ್ತಾನು ವಹಿ ಮತ್ತು ದಾಸ್ತಾನು ವಿವರಗಳನ್ನು ಹಾಜರುಪಡಿಸದಿರುವ ವಿವರ:–

2019–20ನೇ ಸಾಲಿನಲ್ಲಿ ಸಿಡಿ, ಜೆಡ್‌ಆರ್ ಮತ್ತು ವಲಯ ನಕ್ಷೆಗಳನ್ನು ಮುದ್ರಿಸಿ ಖರೀದಿಸಿ ವಿತರಿಸಿರುವುದು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾದ ದಾಖಲಾತಿಗಳಿಂದ ಕಂಡುಬಂದಿರುತ್ತದೆ. ಆದರೆ ಪ್ರಸಕ್ತ ಸಾಲಿನಲ್ಲಿ ಎಷ್ಟು ಸಿಡಿ, ಜೆಡ್‌ಆರ್ ಮತ್ತು ವಲಯ ನಕ್ಷೆಗಳನ್ನು ಮುದ್ರಿಸಲಾಗಿರುವ ಹಾಗೂ ಎಷ್ಟು ಮಾರಾಟ ಮಾಡಲಾಗಿದ್ದ ಹಾಗೂ ವಹಿವಾಟು ಎಷ್ಟು ಉಳಿಕೆ ಇರುತ್ತದೆ ಎಂಬ ವಿಚಾರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ಕ್ರ.ಸಂ.	ವಿವರ	ಸಿಡಿ	ವಲಯ ನಿಯಮಾವಳಿ ಪುಸ್ತಕ	ನಕ್ಷೆ	ಷರಾ
1.	ಪ್ರಾರಂಭಿಕ	0	18	06	
2.	ಖರೀದಿ	–	–	–	
	ಒಟ್ಟು	**0**	**18**	**06**	
3.	ಮಾರಾಟ	–	–	–	
4.	ಬಾಕಿ	0	18	06	

ವರ್ಷಾಂತ್ಯಕ್ಕೆ ಬಾಕಿಯಿರುವ ದಾಸ್ತಾನು ವಿತರಣೆಯ ಘೋಷ್ವಾರೆಯನ್ನು ಹಾಕಿ ಕಛೇರಿಯ ಮುಖ್ಯಸ್ಥರಿಂದ ದೃಢೀಕರಿಸಲು ಸೂಚಿಸಿದೆ.

21. ಉತ್ತಮತೆ ಶುಲ್ಕದ ಶೇ.5ರಷ್ಟು ನಗರ ಯೋಜನಾ ಮಂಡಳಿಗೆ ಪಾವತಿಸಬೇಕಾಗಿದ್ದು, ಪೂರ್ಣ ಮೊತ್ತ ಪಾವತಿಸದಿರುವುದು ಹಾಗೂ ಡಿಸಿಬಿ ವಹಿ ನಿರ್ವಹಿಸದಿರುವುದು:–

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾಕಾಯ್ದೆ 1961ರ ಸೆಕ್ಷನ್ 18ರನ್ವಯ ಪ್ರಾಧಿಕಾರವು ಪ್ರತಿ ವಸೂಲಿಸದ ಉತ್ತಮತೆ ಶಿಲ್ಕುವನ್ನು ಕ್ಯಾಲೆಂಡರ್ ವರ್ಷದಲ್ಲಿ ಲೆಕ್ಕಾಚಾರ ಮಾಡಿ ಶೇಖರಿಸಿದ ಒಟ್ಟಾರೆ ಮೊತ್ತದಲ್ಲಿ ಶೇ.5%ರಷ್ಟು ಮೊತ್ತವನ್ನು ನಗರ ಯೋಜನಾ ಮಂಡಳಿಗೆ ಪಾವತಿಸಬೇಕಾಗಿರುತ್ತದೆ. ಅದರಂತೆ 2019–20ರ ಸಾಲಿನಲ್ಲಿ ಒಟ್ಟು ರೂ.4,01,20,815/–ಗಳಉತ್ತಮತೆ ಶುಲ್ಕ ಸ್ವೀಕರಿಸಿದ್ದು ಈ ಮೊತ್ತಕ್ಕೆ ಶೇ.5ರಷ್ಟು ರೂ.20,06,040/–ಗಳನ್ನು ಪಾವತಿಸಬೇಕಾಗಿರುತ್ತದೆ. ಸದರಿ ಸಾಲಿನ ಶೇ.5ರ ಮೊತ್ತವನ್ನು ಪಾವತಿಸುವ ಬಗ್ಗೆ ಅಗತ್ಯಕ್ರಮವಹಿಸುವುದು ಮತ್ತು ಮಾಹಿತಿಯನ್ನು ಪರಿಶೀಲನೆಗೆ ಒದಗಿಸುವುದು. ಇದೇರೀತಿ ಪ್ರಾಧಿಕಾರ ಪ್ರಾರಂಭವಾದ ದಿನದಿಂದ ಉತ್ತಮತೆ ಶುಲ್ಕ ವಸೂಲಿಸುತ್ತಿದ್ದು ಇದಕ್ಕೆ ಸಂಬಂಧಿಸಿದಂತೆ ಬೇಡಿಕೆ ವಹಿ ನಿರ್ವಹಿಸಿಲ್ಲದ ಕಾರಣ ಪ್ರತಿ ವರ್ಷದ ಬೇಡಿಕೆ, ಪಾವತಿ ಮತ್ತು ಬಾಕಿಯ ವಿವರಗಳನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಕೂಡಲೇ ಒಂದು ಬೇಡಿಕೆ ವಹಿಯನ್ನು ನಿರ್ವಹಿಸಿ ಎಲ್ಲಾ ವಿವರಗಳನ್ನು ಅದರಲ್ಲಿ ನಮೂದಿಸಿ ವರ್ಷಾಂತ್ಯದಲ್ಲಿ ವರ್ಷದ ಬೇಡಿಕೆ, ವಸೂಲಾತಿ ಮತ್ತು ಬಾಕಿಯವಿವರಗಳನ್ನೊಳಗೊಂಡ ಘೋಷ್ವಾರೆ ಹಾಕಿ ಸಂಬಂಧಿಸಿದ ಅಧಿಕಾರಿಗಳು ದೃಢೀಕರಿಸುವುದಲ್ಲದೆ ಹಿಂದಿನ ಬಾಕಿ ಪಾವತಿಸುವ ಬಗ್ಗೆ ಅಗತ್ಯಕ್ರಮವಹಿಸುವುದು. ಸದರಿ ಮೊತ್ತ ರೂ.20,06,040/– ಗಳನ್ನು ಪಾವತಿಸುವವರೆಗೂ ಆಕ್ಷೇಪಣೆಯಲ್ಲಿಡಲಾಗಿದೆ.

22. ಅನುಮೋದಿತ ವಸತಿ ವಿನ್ಯಾಸದಲ್ಲಿನ ಶೇ.40%ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಿರುವ ವಿವರ:–

ಕರ್ನಾಟಕ ಸರ್ಕಾರದ ಸುತ್ತೋಲೆ ಸಂ:ನಅಇ/112/ಬೆಂರೂಪ್ರಾ/2005 ದಿನಾಂಕ:26–05–2005ರಂತೆ ಅನುಮೋದಿತ ವಸತಿ ವಿನ್ಯಾಸದಲ್ಲಿನ ಶೇ.60ರಷ್ಟು ನಿವೇಶನಗಳನ್ನು ನೊಂದಣಿ ಮಾಡುವ ಬಗ್ಗೆ

ಉಪನೋಂದಣಾಧಿಕಾರಿಗಳಿಗೆ ಪತ್ರ ಮುಖೇನ ಬಿಡುಗಡೆಗೊಳಿಸಿರುವ ಸಂಬಂಧ ಹಿಂದಿನ ಸಾಲಿನ ವರದಿಗಳಲ್ಲಿ ಪ್ರಸ್ತಾಪಿಸಲಾಗಿದೆ. ಅದರಂತೆ ಷರತ್ತಿನ ಕ್ರ.ಸಂ:1 ರಂತೆ ಎರಡನೇ ಹಂತದಲ್ಲಿ ಒಟ್ಟಾರೆ ವಿನ್ಯಾಸದಲ್ಲಿನ ಉಳಿಕೆ ಶೇ.40ರಷ್ಟು ನಿವೇಶನಗಳನ್ನು ಬಿಡುಗಡೆಗೆ ಮಾಡುವ ಮುನ್ನ ವಿನ್ಯಾಸದಲ್ಲಿನ ಎಲ್ಲಾ ಸಿವಿಲ್ ಕಾಮಗಾರಿಗಳನ್ನು ಡಾಂಬರ್ ರಸ್ತೆ, ಮಳೆ ನೀರಿನ ಚರಂಡಿ,ಕೊಳಚೆ ನೀರಿನ ಸಂಗ್ರಹಣ ಘಟಕ,ಕುಡಿಯುವ ನೀರಿನ ಸರಬರಾಜು (ಓಹೆಚ್‌ಟಿ) ವಿದ್ಯುಚ್ಛಕ್ತಿ ಸಂಪರ್ಕ ಹಾಗೂ ರಸ್ತೆ ಬದಿ ಸಾಲು ಮರಗಳ ನೆಡುವಿಕೆ ಕಾರ್ಯವನ್ನು ಎರಡು ವರ್ಷದೂಳಗೆ ಸಂಪೂರ್ಣಗೊಳಿಸಿರುವ ಬಗ್ಗೆ ಹಾಗೂ ಷರತ್ತಿನಂತೆ ಎರಡು ವರ್ಷಗಳ ಅವಧಿಯಲ್ಲಿ ನಾಗರೀಕ ಸೌಲಭ್ಯಗಳ ಕಾರ್ಯವನ್ನು ನಿರ್ವಹಿಸಿರುವ ವಸತಿ ವಿನ್ಯಾಸಗಳ ಎರಡು ವರ್ಷಗಳ ಕಾಲಮಿತಿಯೊಳಗೆ ನಿರ್ವಹಿಸದೇ ನವೀಕರಣವನ್ನು ಪಡೆದ ಮಾಲೀಕರ ವಿವರ ನವೀಕರಣವನ್ನು ಪಡೆಯದೇ ಬಡಾವಣೆ ಅಭಿವೃದ್ಧಿಯನ್ನು ಪಡಿಸದೇ ಇರುವ ಮಾಲೀಕರ ವಿವರ ಹಾಗೂ ಪ್ರಾಧಿಕಾರವು ತೆಗೆದುಕೊಂಡಿರುವ ಕ್ರಮದ ವಿವರಗಳ ಮಾಹಿತಿಯನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿರುವುದಿಲ್ಲ.

ಇದಕ್ಕೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆ ಸಂಖ್ಯೆ ನಅಇ:112:ಬೆಂ.ರೂ.ಪ್ರಾ 2005 ದಿನಾಂಕ 26.05.2005ರಂತೆ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಸತಿ ವಿನ್ಯಾಸದಲ್ಲಿನ ಎರಡನೇ ಹಂತದ ಶೇ.40ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಸಂಬಂಧ 2 ವರ್ಷಗಳ ಕಾಲಮಿತಿಯೊಳಗೆ ಅಭಿವೃದ್ಧಿ ಪಡಿಸದೆ/ನವೀಕರಣ ಪಡೆಯದೆ ಇರುವ ವಿನ್ಯಾಸ ಮಾಲೀಕರಿಗೆ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ:ಬಿಎಂಆರ್‌ಡಿಎ/ಎಡಿಟಿಪಿ–2/ಇತರೆ/24/2012–13 ದಿನಾಂಕ:31–10–2014 ರಂತೆ ದಂಡ ವಸೂಲಿಸಿ ನಿವೇಶನ ಬಿಡುಗಡೆ ಕ್ರಮವಹಿಸುವುದು ಅವಶ್ಯಕವಾಗಿರುತ್ತದೆ.

23.ಆನೇಕಲ್ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಸಿ.ಎ ನಿವೇಶನ ಮತ್ತು ಪಾರ್ಕ್‌ಗಳ ವಿವರದ ಬಗ್ಗೆ:–

2018–19ನೇ ಸಾಲಿನಲ್ಲಿ ಯೋಜನಾ ಪ್ರಾಧಿಕಾರದ ವತಿಯಿಂದ ಅನುಮೋದನೆಗೊಂಡಿರುವ ವಿವಿಧ ಬಡಾವಣೆಗಳ ವಿವರಗಳು ಹಾಗೂ ಅನುಮೋದಿತ ಬಡಾವಣೆಗಳಲ್ಲಿ ನಾಗರೀಕ ಸೌಲಭ್ಯಗಳಿಗಾಗಿ ಮೀಸಲಿಟ್ಟ ಜಾಗಗಳಾದ ರಸ್ತೆ/ಚರಂಡಿ/ಪಾರ್ಕ್/ಆಸ್ಪತ್ರೆ/ಆಟದ ಮೈದಾನ ಹಾಗೂ ಸಿ.ಎ. ನಿವೇಶನಗಳನ್ನು ಪ್ರಾಧಿಕಾರದ ಹೆಸರಿಗೆ ಉಪ ನೊಂದಣಾಧಿಕಾರಿಗಳ ಕಛೇರಿಯಿಂದ ನೊಂದಣಿ ಮಾಡಿಸಿರುವ ವಿವರವನ್ನು ಒಳಗೊಂಡಂತೆ ದೃಢೀಕೃತ ವಹಿಯನ್ನು ಹಾಜರುಪಡಿಸುವಂತೆ ಈ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ:07/2019–20 ದಿನಾಂಕ:17.08.2019ರಂದು ಜಾರಿಮಾಡಿ ಕೋರಲಾಗಿತ್ತು. ಈ ಸಂಬಂಧ ಯೋಜನಾ ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ವಿವಿಧ ಬಡಾವಣೆಗಳ ನಕ್ಷೆ ಮಂಜೂರಾತಿ ನೀಡಿದ್ದು, ನಾಗರಿಕ ಸೌಲಭ್ಯ(ಅ.ಂ.)ಕ್ಕಾಗಿ ಒಟ್ಟು 53 ನಿವೇಶನಗಳನ್ನು ಹಾಗೂ ಒಟ್ಟು 207 ಉದ್ಯಾನವನದ ಜಾಗಗಳನ್ನು ಪ್ರಾಧಿಕಾರದವರು ಪಡೆದಿರುತ್ತಾರೆ. ಈ ಬಗ್ಗೆ ವಿವರವನ್ನು ಅನುಬಂಧ – 3ರಲ್ಲಿ ನೀಡಲಾಗಿದೆ.

24. ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿರುವ ಬಡಾವಣೆಗಳಲ್ಲಿ ಗರಿಷ್ಟ 5 ವರ್ಷ ಮುಗಿದರೂ ಅಭಿವೃದ್ಧಿ ಪಡಿಸದೇ ಇರುವ ಬಡಾವಣೆಗಳ ವಿವರ:–

2018–19 ನೇ ಸಾಲಿನಲ್ಲಿ ಆನೇಕಲ್ ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿರುವ ಬಡಾವಣೆಗಳಲ್ಲಿ ಗರಿಷ್ಟ 5 ವರ್ಷ ಮುಗಿದರೂ ಸಹ ಅಭಿವೃದ್ಧಿಪಡಿಸದೇ ಇರುವ ಬಡಾವಣೆಗಳ ವಿವರಗಳನ್ನು ಹಾಜರುಪಡಿಸುವಂತೆ ಲೆಕ್ಕ ವಿಚಾರಣೆ ಪತ್ರ 07/2019–20 ದಿನಾಂಕ:17.08.2019ರಂದು ನೀಡಿದ್ದು ಇದಕ್ಕೆ ಸಂಬಂಧಿಸಿದಂತೆ ಆನೇಕಲ್ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ನೀಡಿರುವ ವಿನ್ಯಾಸಗಳ ಪೈಕಿ 5 ವರ್ಷ ಪೂರ್ಣಗೊಂಡಿದ್ದರೂ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ನಿವೇಶನಗಳನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಿಸಿಕೊಳ್ಳದೇ ಇರುವ ವಿನ್ಯಾಸ ಮಾಲೀಕರುಗಳಿಗೆ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಂಪೂರ್ಣವಾಗಿ ನಿವೇಶನಗಳನ್ನು ಬಿಡುಗಡೆ ಮಾಡಿಕೊಳ್ಳಲು ಸೂಚಿಸಿ ಪತ್ರ ವ್ಯವಹರಿಸಲಾಗಿರುತ್ತದೆ ಎಂದು ಜಂಟಿ ನಿರ್ದೇಶಕರು ಸದಸ್ಯ–ಕಾರ್ಯದರ್ಶಿ ಆನೇಕಲ್ ಯೋಜನಾ ಪ್ರಾಧಿಕಾರದವರು ಉತ್ತರಿಸಿರುತ್ತಾರೆ. ಸರ್ಕಾರದ ಸುತ್ತೋಲೆ ಸಂಖ್ಯೆ: ನ.ಅ.ಇ/599/ಮೈ.ಅ.ಪ್ರ/2012

ದಿನಾಂಕ:03.12.2012ರಂದುಗರಿಷ್ಟ 5 ವರ್ಷದೂಳಗೆ ಅನುಮೋದಿಸಿರುವ ಬಡಾವಣೆಗಳನ್ನು ಅಭಿವೃದ್ದಿಸಬೇಕೆಂದು ಆದೇಶವಿರುತ್ತದೆ. ಈ ಬಗ್ಗೆ ಕ್ರಮ ವಹಿಸಿ ಸರ್ಕಾರದ ಸುತ್ತೋಲೆಯಂತೆ ಕ್ರಮವಹಿಸಿರುವುದು ಅವಶ್ಯವಿರುತ್ತದೆ.

25. ಬಡಾವಣೆ ನಕ್ಷೆ ಅನುಮೋದನೆ ನೀಡುವಾಗ ನಿಯಮ ಉಲ್ಲಂಘಿಸಿ ಕಡಿಮೆ ಉತ್ತಮತೆ ಶುಲ್ಕ ವಸೂಲಿಯಿಂದ ಸಂಸ್ಥೆಗೆ ರೂ.156.06 ಕೋಟಿಗಳು ನಷ್ಟವಾಗಿರುವುದು:

ನಗರಾಭಿವೃದ್ದಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಪರಿವರ್ತಿತ ಭೂಮಿಯಲ್ಲಿ ಅಭಿವೃದ್ದಿದಾರರಿಂದ ಬಡಾವಣೆ ಅಭಿವೃದ್ಧಿಗೊಳಿಸಲು ತಗಲುವ ವಾಸ್ತವಿಕ ವೆಚ್ಚದ ವಿವರಗಳನ್ನು ಪಡೆಯದೆ ಬಡಾವಣೆ ನಕ್ಷೆಗೆ ಅನುಮೋದನೆ ನೀಡಲಾಗುತ್ತಿದೆ ಇದರಿಂದ ಭೂಮಿಯ ಮೌಲ್ಯ ಮತ್ತು ಅಭಿವೃದಿಗೆ ತಗಲುವ ವೆಚ್ಚವನ್ನು ಪರಿಗಣಿಸಿ ಆಯಾ ಸಾಲಿನ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಯನ್ನು ಆಧರಿಸಿ ನಿವೇಶನಗಳ ಮೌಲ್ಯ ನಿರ್ಧರಣೆ ಲೆಕ್ಕಾಚಾರ ಮಾಡಿದಾಗ ಅನುಮೋದಿತ ಬಡಾವಣೆಯ ಮೌಲ್ಯ ನಿರ್ಧರಣೆ ಆಗಿ ಭೂಮಿಯ ಮೌಲ್ಯ ಮತ್ತು ಭೂ ಅಭಿವೃದಿಯ ವೆಚ್ಚ ಕಳೆದು ಉಳಿದ ಮೊತ್ತವು ಭೂಮಿಯ ಉತ್ತಮತೆ ಮೌಲ್ಯ ಆಗಿರುತ್ತದೆ (appreciation of market value of land) ಭೂ ಅಭಿವೃದ್ದಿಗೆ ಅನುಮೋದನೆ ನೀಡುವ ಪೂರ್ವದಲ್ಲಿ ಭೂ ಪರಿವರ್ತನೆ ಭೂಮಿಯ ಅಭಿವೃದಿಯಿಂದ ಹೆಚ್ಚಿನ ಆದಾಯವು ಅಭಿವೃದ್ದಿದಾರನಿಗೆ ಬರುತ್ತದೆ ಹಾಗೂ ಭೂಮಿಯ ಅಂದಾಜು ಮೌಲ್ಯವು ಹೆಚ್ಚಳವಾಗುವುದರಿಂದ ಪ್ರಾಧಿಕಾರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 18ರ ರೀತ್ಯಾ ಈ ಮೌಲ್ಯಯುತ ಭೂಮಿಯ ಅಂದಾಜು ಮೌಲ್ಯದ 1/3 ರಷ್ಟು ಭಾಗಕ್ಕೆ ಮೀರದಂತೆ ಉತ್ತಮತೆಯ ಶುಲ್ಕವನ್ನು ವಿಧಿಸಬೇಕಾಗಿದೆ.

ಸದರಿ ಮಾನದಂಡವನ್ನು ವಸತಿ ಮತ್ತು ಇತರೆ ಕಟ್ಟಡಗಳಿಗೆ ಅಳವಡಿಸಿಕೊಂಡು ಉತ್ತಮತೆ ಶುಲ್ಕವನ್ನು ಲೆಕ್ಕಾಚಾರ ಮಾಡಿ ವಸೂಲಿಸಿದ ಮೊತ್ತವನ್ನು ಪ್ರಾಧಿಕಾರದ ನಿಧಿಗೆ ಜಮಾ ಮಾಡಬೇಕು.

ಪ್ರಾಧಿಕಾರದಲ್ಲಿ ದಿನಾಂಕ 27.11.1997 ರಲ್ಲಿನ ಸುತ್ತೋಲೆಯಲ್ಲಿನ ದರಗಳನ್ನು ಇದುವರೆವಿಗೂ ವಿಧಿಸುತ್ತಾ ಬಂದಿದ್ದು ಕಾಯ್ದೆಯ ನಿಯಮಾವಳಿಯನ್ನು ಸಂಪೂರ್ಣವಾಗಿ ಉಲ್ಲಂಘಿಸಿದೆ. ಈ ಕಾರಣದಿಂದಾಗಿ ಪ್ರಾಧಿಕಾರಕ್ಕೆ ಕೋಟ್ಯಾಂತರ ರೂ.ಗಳು ನಷ್ಟವಾಗಿರುತ್ತದೆ.19 ವರ್ಷಗಳಿಂದ ಇದೇ ದರಗಳನ್ನು ಮುಂದುವರೆಸಿಕೊಂಡು ಬರಲಾಗುತ್ತಿದೆ. ಭೂಮಿಯ ಮೌಲ್ಯ ವರ್ದನೆಗನುಗುಣವಾಗಿ ಆಯಾ ವರ್ಷದ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಯನ್ನು ಅನುಸರಿಸಿ ಶುಲ್ಕ ದರಗಳನ್ನು ಪರಿಷ್ಕರಿಸಿಕೊಂಡಿಲ್ಲ. ಪರಿಷ್ಕರಣೆಗೆ ಸರ್ಕಾರದ ಅನುಮೋದನೆ ಪಡೆಯುವಲ್ಲಿಯೂ ಯಾವುದೇ ಕ್ರಮ ವಹಿಸಿರುವುದಿಲ್ಲ. ಇದು ಸಂಸ್ಥೆಯಿಂದ ಆದ ಗುರುತರ ಲೋಪವಾಗಿರುತ್ತದೆ. ಇಂತಹ ಪ್ರಾಧಿಕಾರದ ನಡೆಯಿಂದ ಸಂಸ್ಥೆಗೆ ಆಗಿರುವ ನಷ್ಟದ ವರವನ್ನು ಅನುಬಂಧ–4 ರಲ್ಲಿ ಅಡಕಗೊಳಿಸಿದೆ.

ಆಯಾ ವರ್ಷದ ಅಂದಾಜು ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಯನ್ನು ಅನುಸರಿಸಿ ಭೂಮಿ/ಕಟ್ಟಡಗಳ ಮೌಲ್ಯ ನಿರ್ಧರಣೆ ಲೆಕ್ಕಾಚಾರ ಮಾಡಿಕೊಂಡು ಉತ್ತಮತೆ ಶುಲ್ಕವನ್ನು ವಸೂಲಿಸಿಕೊಂಡು ಮಾಸ್ಟರ್ ಪ್ಲಾನ್ 2021 ರಲ್ಲಿನ ನಿಗಧಿತ ಗುರಿಗಳನ್ನು ಸಾಧಿಸಲು ಕ್ರಮ ವಹಿಸಬೇಕಾಗಿತ್ತು.ಆದರೆ ಕಡಿಮೆ ಉತ್ತಮತೆ ಶುಲ್ಕದಿಂದ ಸಂಸ್ಥೆಗೆ ನಷ್ಟ ಉಂಟಾಗಿರುವುದಲ್ಲದೆ ಮಾಸ್ಟರ್ ಪ್ಲಾನ್ 2021 ಅನುಷ್ಠಾನಗೊಳ್ಳಲು ಸಕಾಲಿಕ ಕ್ರಮ ವಹಿಸಿಲ್ಲದಿರುವುದು ಕಂಡುಬರುತ್ತದೆ.ಆದ ಕಾರಣ ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವವರೆಗೂ ರೂ.1,56,06,44,296/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

26. ಆನೇಕಲ್ ಯೋಜನಾ ಪ್ರಾಧಿಕಾರ ನಿಧಿಯಲ್ಲಿ ನಿರ್ವಹಿಸಲಾಗಿರುವ ಕಾಮಗಾರಿಗಳನ್ನುಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗೆ ವಹಿಸಿರುವ ಬಗ್ಗೆ::–

ಆನೇಕಲ್ ಯೋಜನಾ ಪ್ರಾಧಿಕಾರ ನಿಧಿಯಲ್ಲಿ ಲಭ್ಯವಿರುವ ಹಣದಲ್ಲಿ ಶೇ.25ರಷ್ಟು ಹಣವನ್ನು ಆಡಳಿತಾತ್ಮಕ ವೆಚ್ಚಗಳಿಗೆ ಮೀಸಲಿರಿಸಿಕೊಂಡು ಉಳಿದ ಹಣವನ್ನು ಯೋಜನಾ ಪ್ರಾಧಿಕಾರದ ಪ್ರದೇಶಗಳಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಕ್ರಿಯೆ ಕೈಗೊಳ್ಳಲಾಗಿದೆ.ಅದರಂತೆ ದಿನಾಂಕ:24.09.2012 ರಂದು ನಡೆದ 37ನೇ ಪ್ರಾಧಿಕಾರದ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:1ರ ತೀರ್ಮಾನದಂತೆ ರೂ.1500 ಲಕ್ಷಗಳಿಗೆ ಕಾಮಗಾರಿಗಳ ಪಟ್ಟಿ ಸಿದ್ದಪಡಿಸಿ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತದೆ ಹಾಗೂ ಸರ್ಕಾರದ ಆದೇಶ ಸಂಖ್ಯೆ ನಅಇ 50 ಬಿಎಂಆರ್ 2012, ಬೆಂಗಳೂರು ದಿನಾಂಕ 02–01–2013 ರಂತೆ ಕಾಮಗಾರಿಗಳಿಗೆ ರೂ.12 ಕೋಟಿ 60 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತಾರೆ. ದಿನಾಂಕ 27.11.2013ರ ಸರ್ಕಾರದ ಆದೇಶದಂತೆ ಕಾಮಗಾರಿಗಳಿಗೆ ರೂ.12 ಕೋಟಿ 60 ಲಕ್ಷಗಳಿಗೆ ಆಡಳಿತಾತ್ಮಕ ಕಾಮಗಾರಿಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆ ವತಿಯಿಂದ ಹಾಗೂ ಲೋಕೋಪಯೋಗಿ ಇಲಾಖೆಗಳ ವತಿಯಿಂದ ನಿರ್ವಹಿಸಲಾಗಿದ್ದು, ಈ ಸಂಬಂಧ ಸದರಿ ಇಲಾಖೆಗಳಿಗೆ ಪಾವತಿಸಲಾಗಿದೆ. ಪಾವತಿಸಿದ ಮೊತ್ತದಲ್ಲಿ ರೂ.112384731/–ಗಳಿಗೆ ಉಪಯೋಗತ ಪ್ರಮಾಣ ಪತ್ರ (Utilization Certificate) ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸುವವರೆಗೂ ರೂ.112384731/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರ ಅನುಬಂಧ–4ರಲ್ಲಿ ವಿವರಿಸಿದೆ.

27.ಹೊರಗುತ್ತಿಗೆ ಆಧಾರದ ಮೇಲೆ ನೌಕರರನ್ನು ನೇಮಿಸಿಕೊಂಡು ಪ್ರಾಧಿಕಾರದ ಕೆಲಸ ಕಾರ್ಯಗಳನ್ನು ನಿರ್ವಹಿಸುತಿರುವುದು:–

2019–20ರ ಸಾಲಿನಲ್ಲಿ ಪ್ರಾಧಿಕಾರದ ದಿನನಿತ್ಯ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಖಾಯಂ ನೌಕರರು ಇಲ್ಲದ ಪ್ರಯುಕ್ತ ಈ ಕೆಳಕಂಡ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡು ವೇತನ ಪಾವತಿ ಮಾಡಲಾಗಿದೆ

ಕ್ರ.ಸಂ.	ಹುದ್ದೆಯ ವಿವರ	ನೇಮಿಸಿಕೊಂಡ ಹುದ್ದೆ	ಪಡೆಯುತ್ತಿರುವ ವೇತನ
1.	ಲೆಕ್ಕಿಗರು	01 ಹುದ್ದೆ	15248
2.	ದ್ವಿತೀಯದರ್ಜೆ ಸಹಾಯಕರು	01 ಹುದ್ದೆ	12443
3.	ಕಂಪ್ಯೂಟರ್ ಆಪರೇಟರ್	03 ಹುದ್ದೆ	12443
4.	'ಡಿ' ಗ್ರೂಪ್ ನೌಕರರು	02 ಹುದ್ದೆ	9209

ಇದಕ್ಕೆ ಸಂಬಂಧಿಸಿದ ಕಡತ ಪರಿಶೀಲಿಸಲಾಗಿ, ಮೇಲಿನ ನೌಕರರನ್ನು ನೇಮಿಸಿಕೊಳ್ಳಲು 2011–12ರಲ್ಲಿ ದರಪಟ್ಟಿ ಪ್ರಕ್ರಿಯೆ ನಡೆಸಲಾಗಿದ್ದು, ಇದರಲ್ಲಿ 3 ಸಂಸ್ಥೆಗಳು ಭಾಗವಹಿಸಿದ್ದು ಅತಿ ಕಡಿಮೆದರ ನಮೂದಿಸಲಾಗಿದ್ದು, ಮೆ:ಎಸ್.ಎ.ಮ್ಯಾನ್‌ಪವರ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ಯವರಿಂದ ಮೇಲಿನ ನೌಕರರರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದ್ದು, ದಿನಾಂಕ:11–04–2019ರಂದು ನಡೆದ ಪ್ರಾಧಿಕಾರದ 60ನೇ ಸಭೆಯ ವಿಷಯ ಸಂಖ್ಯೆ:15ರಲ್ಲಿ ತೀರ್ಮಾನಿಸಲಾಗಿರುತ್ತದೆ. ಹಿಂದಿನ ಸಾಲಿನ ಅನುಸಾರ ದಿನಾಂಕ:01–04–2018ರಿಂದ 31–03–2019ರ ವರೆಗೆ ಒಂದು ವರ್ಷದ ಅವಧಿಗೆ ಪ್ರಸ್ತುತ ನೌಕರರು ಪಡೆಯುತ್ತಿರುವ ಸಂಭಾವನೆಯನ್ನು ಸ್ಥಿರೀಕರಣಗೊಳಿಸಿ ಮಂಜೂರಾತಿ ನೀಡಲಾಗಿದೆ. ಇನ್ನು ಮುಂದೆ ಈ ಸಂಬಂಧ ಆಯಾ ವರ್ಷಗಳನ್ನು ಟೆಂಡರ್ ಆಹ್ವಾನಿಸಿ ಸ್ಪರ್ಧಾತ್ಮಕದರದ ಆಧಾರದ ಮೇಲೆ ಕ್ರಮವಹಿಸುವುದು ಅಗತ್ಯವಾಗಿರುತ್ತದೆ.

27(A). ಹೊರಗುತ್ತಿಗೆ ವಾಹನ ಪಡೆಯುವ ಬಗ್ಗೆ:–

2019–20ರ ಸಾಲಿನಲ್ಲಿ ಪ್ರಾಧಿಕಾರದ ದಿನನಿತ್ಯ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ವಾಹನಗಳನ್ನು ಬಾಡಿಗೆಗೆ ಪಡೆದಿರುವುದು ಕಂಡುಬಂದಿರುತ್ತದೆ. ಮೆ:ಸುವರ್ಣಮುಖಿ ಟ್ರಾನ್ಸ್‌ಪೋರ್ಟ್‌ರವರು 01 ವಾಹನಗಳನ್ನು ಹಾಗೂ ಮೆ:ಕಾವ್ಯಶ್ರೀ ಟೂರ್ಸ್‌ಅಂಡ್‌ಟ್ರಾವೆಲ್ಸ್‌ರವರು 03 ವಾಹನಗಳನ್ನು ಒಟ್ಟು 04 ವಾಹನಗಳನ್ನು ಸದರಿ ಸಂಸ್ಥೆಗೆ ಬಾಡಿಗೆ ಆಧಾರದ ಮೇಲೆ ನೀಡಿರುವುದು ಕಂಡುಬಂದಿರುತ್ತದೆ. ಸದರಿ ಸಾಲಿಗೆ ಒಟ್ಟು ರೂ.1251585/–ಗಳನ್ನು ಪಾವತಿಸಲಾಗಿರುತ್ತದೆ.

28. 2019–20ನೇ ಸಾಲಿನಲ್ಲಿ ಅಪಾರ್ಟ್‌ಮೆಂಟ್‌ಗಳಿಗೆ ನಕ್ಷೆ ಮಂಜೂರಾತಿ ನೀಡಿರುವ ಬಗ್ಗೆ:–

2019–20ರ ಸಾಲಿನಲ್ಲಿ ಎಷ್ಟು ಅಪಾರ್ಟ್‌ಮೆಂಟ್‌ಗಳಿಗೆ ನಕ್ಷೆ ಮಂಜೂರಾತಿ ನೀಡಲಾಗಿದೆ ಹಾಗೂ ಈ ಬಗ್ಗೆ ಪ್ರಾಧಿಕಾರಕ್ಕೆ ಪಡೆದಿರುವ ಉತ್ತಮತೆ ಶುಲ್ಕ, ಭದ್ರತಾ ಠೇವಣಿ ಹಾಗೂ ನಕ್ಷೆಪ್ರತಿ ಶುಲ್ಕದ ವಿವರಗಳನ್ನು ಲೆಕ್ಕ ತನಿಖೆಗೆ ಒದಗಿಸಲು ಕೋರಲಾಗಿದ್ದು, ಈ ಬಗ್ಗೆ ಲೆಕ್ಕ ವಿಚಾರಣೆ ಪತ್ರ ಸಂಖ್ಯೆ:01ರಲ್ಲಿ ನೀಡಲಾಗಿದ್ದು, ಇದುವರೆವಿಗೂ ಮಾಹಿತಿಯನ್ನು ನೀಡಿರುವುದಿಲ್ಲ.

29. ಲೆಕ್ಕ ಪರಿಶೋಧನಾ ಶುಲ್ಕ:–

I	2018–19ರಲ್ಲಿ ಒಟ್ಟುಜಮೆ		11968685744
	(–)ಕಳೆಯುವುದು		
1	ಬಡಾವಣೆ / ಕಟ್ಟಡ ಸಮುಚ್ಛಯ ಭದ್ರತಾಠೇವಣಿ	18807850	
2	ನಿಶ್ಚಿತ ಠೇವಣಿಗಳ ಹಿಂಪಡೆತ	1905526281	
3	ಬ್ಯಾಂಕ್ ಬಡ್ಡಿ	1709610	
4	ಮಾಹಿತಿ ಹಕ್ಕು ಶುಲ್ಕ	13104	
	ಒಟ್ಟು ರೂ.	**1926056845**	
	ನಿವ್ವಳ ಜಮೆ		**42628899**
I I	**ಒಟ್ಟು ವೆಚ್ಚ**		**1961169925**
	(–)ಕಳೆಯುವುದು		
1	ಆದಾಯತೆರಿಗೆ ಪಾವತಿ	127644	
2	ನಿಶ್ಚಿತ ಠೇವಣಿಗಳು	1785700000	
3	ದೂರವಾಣಿ ವೆಚ್ಚ	71470	
4	ವಿದ್ಯುತ್ ಶುಲ್ಕ	31239	
5	ಬ್ಯಾಂಕ್‌ಚಾರ್ಜಸ್	4512	
	ಒಟ್ಟು ರೂ.	**1785934865**	
	ನಿವ್ವಳ ವೆಚ್ಚ ರೂ.		175235060

2018–19ರ ಸಾಲಿನಲ್ಲಿ ಪ್ರಾಧಿಕಾರದಲ್ಲಿ ಈ ಕೆಳಕಂಡಂತೆ ಆರ್ಥಿಕ ವಹಿವಾಟು ನಡೆಸಿದ್ದು ಲೆಕ್ಕ ತಪಾಸಣಾ ಶುಲ್ಕವನ್ನು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಿದೆ.ಲೆಕ್ಕ ಪರಿಶೋಧನಾ ಶುಲ್ಕಕ್ಕೆ ತೆಗೆದುಕೊಳ್ಳಬೇಕಾದ ಒಟ್ಟು ನಿವ್ವಳ ಜಮಾ ಮತ್ತು ನಿವ್ವಳ ವೆಚ್ಚ ಒಟ್ಟು ಮೊಬಲಗು (42628899+ 175235060 = 217863959)

(217863959 X 0.20) = 4,35,728/–

———————————

100

ದಿನಾಂಕ:31–03–2019ಕ್ಕೆ ಅಂತ್ಯಕ್ಕೆ ಬಾಕಿ ಇರುವ ಲೆಕ್ಕ ಪರಿಶೋಧನಾ ಶುಲ್ಕ ರೂ.. 4,35,728/– ಗಳನ್ನು ಜಮಾ ಮಾಡಲು ಅಗತ್ಯಕ್ರಮ ವಹಿಸುವುದು. ಲೆಕ್ಕ ಶೀರ್ಷಿಕೆಗೆ ಜಮಾ ಮಾಡುವವರೆಗೂ ರೂ. 4,35,728/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

01–04–2019ಕ್ಕೆ ಪ್ರಾರಂಭಿಕ ಬಾಕಿ	2399138
2019–20ರಲ್ಲಿ ಬೇಡಿಕೆ	435728
ಒಟ್ಟು	**2834866**
2019–20ರಲ್ಲಿ ಪಾವತಿ	–
31–03–2020ಕ್ಕೆ ಆಖೈರು ಶಿಲ್ಕು	2834866

ಲೆಕ್ಕ ಶೀರ್ಷಿಕೆ: 0070–60–110–0–01

0070	ಇತರೆ ಆಡಳಿತ ಸೇವೆಗಳು
60	ಇತರೆ ಸೇವೆಗಳು
110	ಸರ್ಕಾರಿ ಲೆಕ್ಕ ಪರಿಶೋಧನಾ ಶುಲ್ಕ
0–01	ಲೆಕ್ಕ ಪರಿಶೋಧನಾ ಶುಲ್ಕ

30.ಮಾಹಿತಿ ಹಕ್ಕು ವಸೂಲಿ ಶುಲ್ಕ ಲೆಕ್ಕ ಶೀರ್ಷಿಕೆಗೆ ಜಮಾ ಮಾಡದಿರುವುದು:–

ಪ್ರಸಕ್ತ ಸಾಲಿನಲ್ಲಿ ಮಾಹಿತಿ ಹಕ್ಕಿನಡಿ ಪ್ರಾಧಿಕಾರದಲ್ಲಿ ರೂ.13,104/– ಗಳ ಶುಲ್ಕ ವಸೂಲಿಯಾಗಿದ್ದು,ಸದರಿ ಶುಲ್ಕವನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಬೇಕಾಗಿದ್ದು, ಜಮೆ ಮಾಡದೆ ಸಂಸ್ಥೆಯ ಖಾತೆಯಲ್ಲಿ ಉಳಿದಿರುತ್ತದೆ. ಸದರಿ ಮೊತ್ತವನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿ ವಿವರಗಳನ್ನು ಹಾಜರುಪಡಿಸುವವರೆಗೂ ರೂ.13,104/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ

31. ಸಾಮಾನ್ಯ ಅಭಿಪ್ರಾಯ:–

ಲೆಕ್ಕ ಪತ್ರಗಳ ನಿರ್ವಹಣೆಯಲ್ಲಿ ಇನ್ನೂ ಹೆಚ್ಚಿನ ಸುಧಾರಣೆ ಅಗತ್ಯ ಹಾಗೂ ಸಾಮಾನ್ಯ ನಗದು ಪುಸ್ತಕವನ್ನು ನಿಗಧಿತ ನಮೂನೆಯಲ್ಲಿ ನಿರ್ವಹಿಸದಿರುವುದು ಮತ್ತು ಸಾಮಾನ್ಯ ನಗದು ವಹಿಯಲ್ಲಿ ಲೆಕ್ಕ ಸಮನ್ವಯ ಮಾಡದಿರುವುದು ಅಲ್ಲದೆ ಯೋಜನಾ ಮಂಡಳಿಗೆ ಶೇ.5ರಷ್ಟು ವಂತಿಗೆ ಹಣ ಪೂರ್ಣವಾಗಿ ಪಾವತಿಸದಿರುವುದು ಮತ್ತು ಈ ಬಗ್ಗೆ ಒಂದು ಡಿಸಿಬಿ ವಹಿ ನಿರ್ವಹಿಸದಿರುವುದು ಪ್ರಮುಖ ನ್ಯೂನ್ಯತೆಯಾಗಿದ್ದು, ಈ ಬಗ್ಗೆ ಕ್ರಮ ವಹಿಸಲು ಸೂಚಿಸಿದೆ.